ಸೆರಗಿನಿಂದ ಕಣ್ಣನ್ನು ಒರೆಸಿಕೊಂಡು 'ಅಲ್ಲಾಲೆ ಕೆಂಪಿರೆಡ್ಡಿ, ಇನ್ನೂ ಏಟು ಗುಡ್ಡೆ ಆಕ್ಕೊಬೇಕಂತಿದೀಯ. ಮೆಕ್ಕೋಷ್ಟು ಮಾಡ್ಕಂಡ್ರೆ ಸಾಲ್ದ ನರುನ್ನೆ. ಉಳ ಬಿದ್ದು ಸಾಯ್ತೀಯ ಕನ್ಲ ನೀನು' ಉಕ್ಕಿ ಬರುತ್ತಿರುವ ದುಃಖವನ್ನು ತಡೆದುಕೊಳ್ಳುತ್ತಲೆ ನುಡಿದಳು. ಅಷ್ಟರಲ್ಲಿ ಕೆಂಪಿರೆಡ್ಡಿ 'ನೀ ಯಾ ಊರವ್ವೆ ನಂಕೇಳಕ್ಕೆ. ಎಂತೊಟ್ಟು ಕೆಲುಸ ಐತಿ ನಂಕೆ. ಇನ್ನು ಎಲ್ಡು ವಾರಕ್ಕೆ ನಮ್ಮೂರುಕೆ ರಾಷ್ಟ್ರಪತಿಗೋಳು ಬರ್ತಿದಾರೆ. ರೋಡುಗಳುಕೆ ತಾರಾಕಿಸ್ಬೇಕು... ಚರಂಡಿಗಳ್ನೆಲ್ಲಾ ಕಿಲೀನ್ ಮಾಡಿಸ್ಬೇಕು. ಸ್ಕೂಲಿಕೆ ಡೆಕೋರೇಸನ್ ಮಾಡ್ಬೇಕು. ಎಂತೊಟ್ಟು ಪಂಗೈತಿ... ಈ ಆಳಾದ ಮಳೆ ಬೇರೆ ನಿಲ್ಲಂಗಿಲ್ಲ. ಇನ್ನೂ ಒಂದು ವಾರ ಇಂಗೆ ಯಿಡಕೊಂಡ್ರೆ ನಮ್ಮೂರ ಕತಿ ಮುಗಿದಂಗೆ' ಎನ್ನುತ್ತಾ ಇಲ್ಲೇ ಇದ್ರೆ ಅದೇನೇನ್ ಬಯ್ತಾಳೊ ಎಂದುಕೊಳ್ಳುತ ನಡೆದುಬಿಟ್ಟ. ಶಾರದಮ್ಮ

